RNU AIR DHARWAD

# SEPTEMBER 03, 2024

## AKASHAVANI - DHARWAD

## PRADESH SAMACHARA (KANNADA) 07.05 A.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು:**

<><><>

- ಕಾನು ಸೊಪ್ಪಿನ ಬೆಟ್ಟಗಳಲ್ಲಿ, ಪಾರಂಪರಿಕ ಸಾಗುವಳಿ ಸಮಸ್ಯೆಗೆ, ಪರ್ಯಾಯ ಪರಿಹಾರ ಸೂತ್ರ – ಮಧು ಬಂಗಾರಪ್ಪ.
- 'ವರ್ತುಳ ಆರ್ಥಿಕತೆ: ಮೌಲ್ಯ ಹೆಚ್ಚಿಸಲು ಸೇತುವೆಯಾಗಿ, ಪಾಲುದಾರಿಕೆ'– ಧ್ಯೇಯದೊಂದಿಗೆ, ವಿಶ್ವ ತೆಂಗು ದಿನಾಚರಣೆ.
- ಬಾಲ್ಯ ವಿವಾಹ ತಡೆಗೆ, ನೂತನ ಕಾಯ್ದೆ ಜಾರಿಗೆ – ಲಕ್ಷ್ಮೀ ಹೆಬ್ಬಾಳ್ಕರ್.
- ವಾರ್ಷಿಕ 80 ಕೋಟಿ ರೂಪಾಯಿ, ಅಲ್ಪಸಂಖ್ಯಾತರಿಗೆ ಶಿಷ್ಯವೇತನ – ಝಮೀರ್ ಅಹ್ಮದ್ ಖಾನ್.

<><><>

ಇತ್ತೀಚಿನ ಕೆ.ಪಿ.ಎಸ್.ಸಿ. ಗೆಜೆಟೆಡ್ ಪ್ರೊಬೆಷನರಿ ಹುದ್ದೆಗಳ ಪರೀಕ್ಷೆಯಲ್ಲಿ, ಅಸಮರ್ಪಕ ಕನ್ನಡಾನುವಾದ ಹಿನ್ನೆಲೆ, ಎಲ್ಲ ಅಭ್ಯರ್ಥಿಗಳಿಗೆ ನ್ಯಾಯ ಸಿಗುವಂತೆ, 2 ತಿಂಗಳೊಳಗೆ ಮರು ಪರೀಕ್ಷೆ ನಡೆಸುವಂತೆ, ಕರ್ನಾಟಕ ಲೋಕ ಸೇವಾ ಆಯೋಗಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದ್ದಾರೆ. ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಈ ವಿಷಯ ಪ್ರಕಟಿಸಿರುವ ಮುಖ್ಯಮಂತ್ರಿ, ಕರ್ತವ್ಯ ಲೋಪವೆಸಗಿದ ಅಧಿಕಾರಿಗಳನ್ನು, ಸೇವೆಯಿಂದ ಅಮಾನತು ಮಾಡಲಾಗಿದೆ. ನೇಮಕಾತಿ ಪ್ರಕ್ರಿಯೆಗಳ ಸಮಗ್ರತೆ ಮತ್ತು ವಿಶ್ವಾಸಾರ್ಹತೆಯನ್ನು ಎತ್ತಿ ಹಿಡಿದು, ಪರೀಕ್ಷಾರ್ಥಿಗಳ ಹಿತ ಕಾಯಲು ಬದ್ಧ ಎಂದು ಸ್ಪಷ್ಟಪಡಿಸಿದ್ದಾರೆ.

<><><>

ಕಾನು ಸೊಪ್ಪಿನ ಬೆಟ್ಟ, ಹುಲ್ಲು ಬಾಡಿಯ ಗೋಮಾಳಗಳಲ್ಲಿ, ಹಲವು ದಶಕಗಳಿಂದ ಪಾರಂಪರಿಕವಾಗಿ ಸಾಗುವಳಿ ಮಾಡಿಕೊಂಡು ಜೀವನ ನಿರ್ವಹಿಸುತ್ತಿರುವ, ಕೃಷಿಕರನ್ನು ಒಕ್ಕಲೆಬ್ಬಿಸುವುದು ಸರಿಯಲ್ಲ; ಮಾನವೀಯತೆಯಿಂದ ಪ್ರಕರಣ ನಿರ್ವಹಿಸಲಾಗುವುದು ಎಂದು, ಶಿವಮೊಗ್ಗ ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ಹೇಳಿದ್ದಾರೆ. ಸೊರಬದ ತಾಲೂಕು ಪಂಚಾಯ್ತಿ ಕಚೇರಿಯಲ್ಲಿ, 'ಬಗೈರ್ ಹುಕುಂ ಸಮಿತಿ'ಯ ಸಭೆಯಲ್ಲಿ ಪಾಲ್ಗೊಂಡು, ಮಾತನಾಡಿದರು. ಅರಣ್ಯ ಮತ್ತು ಕಂದಾಯ ಭೂಮಿಗೆ ಸಂಬಂಧಿಸಿ, ಅನೇಕ ಸಮಸ್ಯೆಗಳು ಹಲವು ದಶಕಗಳಿಂದ ಇತ್ಯರ್ಥಗೊಳ್ಳದೇ ಬಾಕಿ ಉಳಿದಿವೆ. ಮುಖ್ಯಮಂತ್ರಿಯವರೊಂದಿಗೆ ಸಮಾಲೋಚಿಸಿ, ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು ಎಂದರು.

<><><>

ತಹಸೀಲ್ದಾರ್ ಮಂಜುಳಾ ಹೆಗಡಾಳ ಮಾತನಾಡಿ, 'ಬಗೈರ್ ಹುಕುಂ ಜಮೀನು ಮಂಜುರಾತಿ' ಕೋರಿ, ಆನ್ಲೈನ್‌ನಲ್ಲಿ ಈ ವರೆಗೆ, 5 ಸಾವಿರದ 113 ಅರ್ಜಿಗಳು ದಾಖಲಾಗಿವೆ. 91 ಅರ್ಜಿದಾರರಿಗೆ ಹಕ್ಕುಪತ್ರ ವಿತರಿಸಲಾಗಿದೆ. 166 ಜನರ ನೋಂದಣಿ ಕಾರ್ಯ ಪ್ರಗತಿಯಲ್ಲಿದೆ ಎಂದರು.

<><><>

ವಿಶ್ವ ತೆಂಗು ದಿನಾಚರಣೆಯನ್ನು, 'ವರ್ತುಳ ಆರ್ಥಿಕತೆ; ಮೌಲ್ಯ ಹೆಚ್ಚಿಸಲು ಸೇತುವೆಯಾಗಿ ಪಾಲುದಾರಿಕೆ' ಎಂಬ ಧ್ಯೇಯದೊಂದಿಗೆ, ನಿನ್ನೆ ಆಚರಿಸಲಾಯಿತು. ಕಾಸರಗೋಡಿನ, ಕೂಡ್ಲುವಿನಲ್ಲಿರುವ, **Central Plantation Crops Research Institute – C.P.C.R.I.** ಸಂಸ್ಥೆಯ ನಿರ್ದೇಶಕ ಡಾಕ್ಟರ್ ಕೆ. ಬಾಲಚಂದ್ರ ಹೆಬ್ಬಾರ್, ತೆಂಗಿನ ಮೌಲ್ಯವರ್ಧನೆಗೆ ಕೈಗೊಂಡಿರುವ ಕ್ರಮಗಳ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.

<><><>

ಡಾಕ್ಟರ್ ಕೆ. ಬಾಲಚಂದ್ರ ಹೆಬ್ಬಾರ್ ಧ್ವನಿ 48 ಸೆಕೆಂದುಗಳು

<><><>

ಕೃಷಿ ಇಲಾಖೆ, ಕೃಷಿ ಭಾಗ್ಯ ಯೋಜನೆಯನ್ನು ಮರು ಜಾರಿ ಮಾಡಿದೆ. ಈ ಯೋಜನೆ ಅಡಿ, ಕೃಷಿ ಹೊಂಡ ಮತ್ತು ಇತರೇ ಘಟಕಗಳನ್ನು ಅಳವಡಿಸಿಕೊಳ್ಳಲು, ಇಚ್ಛಿಸುವ ಅರ್ಹ ರೈತರು, ಈ ತಿಂಗಳ 20ನೇ ತಾರೀಖಿನ ಒಳಗಾಗಿ, ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ ಸಂಬಂಧಪಟ್ಟ ರೈತ ಸಂಪರ್ಕ ಕೇಂದ್ರ ಅಥವಾ ಸಹಾಯಕ ಕೃಷಿ ನಿರ್ದೇಶಕರ ಕಚೇರಿಯನ್ನು ಸಂಪರ್ಕಿಸಬಹುದು.

<><><>

ಕಬ್ಬಿನ ತಳಿಗಳಾದ **CoSNK 13436** ಮತ್ತು **SNK 13374** ನಲ್ಲಿ, ಪಕ್ಕಾ ಬೋಯಿಂಗ್ ಎಂಬ ಗಾಳಿಯ ಮೂಲಕ ಹರಡುವ, ಶಿಲೀಂಧ್ರ ರೋಗ ಲಕ್ಷಣಗಳು, ತೀವ್ರವಾಗಿ ಹರಡುತ್ತಿರುವುದು ಕಂಡು ಬಂದಿದೆ. ಧಾರವಾಡದ ಕೃಷಿ ವಿಶ್ವವಿದ್ಯಾಲಯ ಹಾಗೂ ವಿವಿಧ ಸಂಶೋಧನಾ ಕೇಂದ್ರಗಳಲ್ಲಿ ಪ್ರಾಯೋಗಿಕ ಹಂತದಲ್ಲಿದ್ದ, ಈ ಎರಡು ಕಬ್ಬಿನ ತಳಿಗಳನ್ನು ರೈತರು ಬೆಳೆಯಬಾರದೆಂದು, ವಿಶ್ವವಿದ್ಯಾಲಯದ ಕೋರಿದೆ.

<><><>

ಉತ್ತರಕನ್ನಡ ಜಿಲ್ಲೆ, ದಾಂಡೇಲಿ ಅರಣ್ಯ ಸಂಶೋಧನಾ ವಲಯದ, ಕೋಗಿಲಬನ ನರ್ಸರಿಯಲ್ಲಿ, ಉತ್ತಮ ಗುಣಮಟ್ಟದ ಅಲ್ಫಾನ್ಸೋ ಹಾಗೂ ಮಲ್ಲಿಕಾ ತಳಿಯ ಮಾವು, ರಾಮದುರ್ಗ ತಳಿಯ ನೆಲ್ಲಿ ಹಾಗೂ ಗೋಡಂಬಿ ಕಸಿ ಸಸಿಗಳು, ರಿಯಾಯಿತಿ ದರದಲ್ಲಿ ರೈತರಿಗೆ ವಿತರಿಸಲು ಲಭ್ಯ ಇವೆ. ರೈತರು ಕೋಗಿಲ ಬನ ನರ್ಸರಿಗೆ ಭೇಟಿ ನೀಡಿ, ಖರೀದಿಸಬಹುದು ಎಂದು, ದಾಂಡೇಲಿ ವಲಯ ಅರಣ್ಯಾಧಿಕಾರಿ ತಿಳಿಸಿದ್ದಾರೆ.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಬಾಲ್ಯ ವಿವಾಹ ತಡೆಯಲು ನೂತನ ಕಾಯ್ದೆ ಜಾರಿಗೊಳಿಸಲಾಗುವುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಖಾತೆ ಸಚಿವರಾದ ಲಕ್ಷ್ಮಿ ಹೆಬ್ಬಾಳ್ಕರ್ ತಿಳಿಸಿದ್ದಾರೆ. ಚಿತ್ರದುರ್ಗದಲ್ಲಿ ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ಅವರು, ಗೃಹ, ಡಿ.ಪಿ.ಆರ್, ನ್ಯಾಯಾಂಗ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಆರೋಗ್ಯ, ಶಿಕ್ಷಣ ಸೇರಿದಂತೆ, ಒಂಬತ್ತು ಇಲಾಖೆಗಳನ್ನು ಒಳಗೊಂಡ, ನೂತನ ಕಾಯ್ದೆ ಜಾರಿ ಗೊಳಿಸಲು, ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಲಾಗಿದೆ ಎಂದರು.

<><><>

ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲದಿಂದ, ಮಕ್ಕಳ ಸಹಾಯ ವಾಣಿ 1098 ಕ್ಕೆ ಬಂದ ದೂರು ಆಧರಿಸಿ, ಎರಡು ಬಾಲ್ಯ ವಿವಾಹಗಳನ್ನು ಮಕ್ಕಳ ರಕ್ಷಣಾಧಿಕಾರಿಗಳು ತಡೆದಿದ್ದಾರೆ.

<><><>

ರಾಜ್ಯ ಸರ್ಕಾರ, ಅಲ್ಪಸಂಖ್ಯಾತರಿಗೆ ಶಿಷ್ಯವೇತನವಾಗಿ, ವಾರ್ಷಿಕ 80 ಕೋಟಿ ರೂಪಾಯಿ ನೀಡುತ್ತಿದೆ. ಹೆಣ್ಣು ಮಕ್ಕಳು ಶಿಕ್ಷಣವೇತ್ತರಾಗಿ, ಸ್ವಾವಲಂಬಿಗಳಾಗಬೇಕು ಎಂದು, ವಕ್ಫ್ ಮತ್ತು ಅಲ್ಪ ಸಂಖ್ಯಾತರ ಅಭಿವೃದ್ಧಿ ಖಾತೆ ಸಚಿವ ಝಮೀರ ಅಹ್ಮದ್ ಖಾನ್ ಹೇಳಿದ್ದಾರೆ. ಹುಬ್ಬಳ್ಳಿಯ ಮೌಲಾನಾ ಅಬುಲ್ ಕಲಾಂ ಆಜಾದ್, ಅಲ್ಪ ಸಂಖ್ಯಾತರ ಪದವಿ ಪೂರ್ವ ಮಹಾವಿದ್ಯಾಲಯವನ್ನು ಉದ್ಘಾಟಿಸಿ, ಮಾತನಾಡಿದರು.

<><><>

ಬಳಿಕ ಧಾರವಾಡ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ, ಧಾರವಾಡ ಮತ್ತು ಉತ್ತರಕನ್ನಡ ಜಿಲ್ಲೆಯ ಅಧಿಕಾರಿಗಳೊಂದಿಗೆ, ವಕ್ಫ್ ಮತ್ತು ವಸತಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ ನಡೆಸಿದರು. ಧಾರವಾಡ ಜಿಲ್ಲೆಯಾದ್ಯಂತ, 2 ಸಾವಿರದ 453 ವಕ್ಫ್ ಆಸ್ತಿಗಳಿವೆ. ಆ ಪೈಕಿ 481 ಆಸ್ತಿ ಪ್ರಕರಣಗಳು, ವಿಚಾರಣಾ ಹಂತದಲ್ಲಿ ಬಾಕಿ ಇವೆ. ವಕ್ಫ್ ಆಸ್ತಿಗಳ ಸಮೀಕ್ಷೆ ಮತ್ತು ರಕ್ಷಣೆಯಲ್ಲಿ, ಧಾರವಾಡ ಜಿಲ್ಲೆ ಮುಂಚೂಣಿಯಲ್ಲಿದೆ. ಉತ್ತರಕನ್ನಡ ಜಿಲ್ಲೆಯಲ್ಲಿ, ವಕ್ಫ್ ಆಸ್ತಿ ಹಾಗೂ ಕಬರಸ್ತಾನ್ ಗಳಿಗೆ ಭೂಮಿ ಸಮಸ್ಯೆ ಇದೆ. ಕಂದಾಯ ಹಾಗೂ ಅರಣ್ಯ ಖಾತೆ ಸಚಿವರೊಂದಿಗೆ ಸಮಾಲೋಚಿಸಿ, ಪರಿಹರಿಸುವುದಾಗಿ ಸಚಿವರು ತಿಳಿಸಿದರು.

<><><>

ಜಪಾನಿ ಶಿಕ್ಷಣ ತಜ್ಞ ತೆತ್ಸುಕೊ ಕೊರೋಯೋನಾಗಿ ಅವರ, 'ತೊತ್ತೋಚಾನ್' ಪುಸ್ತಕದ ಪ್ರೇರಣೆಯಿಂದ, ಧಾರವಾಡದಲ್ಲಿ ಆರಂಭಗೊಂಡ ಬಾಲ ಬಳಗ ಶಾಲೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ, ಮಕ್ಕಳಿಂದ 'ನೂಲು ಗಾಲಿಯ ಸಂಗೀತ' ಎಂಬ ರಂಗ ಪ್ರಯೋಗ ಹಾಗೂ ಚರಖಾದಿಂದ ನೂಲುವ ಪ್ರದರ್ಶನ, ಇಂದು ಸಂಜೆ ಆಯೋಜಿಸಿದೆ. ಆಲೂರು ವೆಂಕಟರಾವ ಭವನದಲ್ಲಿ ಸಂಜೆ 5.45ಕ್ಕೆ ಜರುಗುವ ರಂಗ ಪ್ರಯೋಗದ ಬಗ್ಗೆ, ಬಾಲ ಬಳಗ ಸೃಜನಶೀಲ ಟ್ರಸ್ಟ್ ಅಧ್ಯಕ್ಷ, ಖ್ಯಾತ ಸ್ತ್ರೀ ಆರೋಗ್ಯ ತಜ್ಞ ಡಾಕ್ಟರ್ ಸಂಜೀವ ಕುಲಕರ್ಣಿ, ಪ್ರದೇಶ ಸಮಾಚಾರಕ್ಕಾಗಿ ಹೆಚ್ಚಿನ ಮಾಹಿತಿ ನೀಡಿದ್ದಾರೆ.

<><><>

ಡಾಕ್ಟರ್ ಸಂಜೀವ ಕುಲಕರ್ಣಿ ಧ್ವನಿ 45 ಸೆಕೆಂದುಗಳು

<><><>

ಅರಣ್ಯ ಇಲಾಖೆಗೆ ಹೊಸದಾಗಿ ಆಯ್ಕೆಯಾದ, 267 ಅರಣ್ಯ ವೀಕ್ಷಕರಿಗೆ ನೇಮಕಾತಿ ಪತ್ರ ಹಾಗೂ ಗಣನೀಯ ಸೇವೆ ಸಲ್ಲಿಸಿದ, 49 ಅರಣ್ಯಾಧಿಕಾರಿಗಳಿಗೆ ಮುಖ್ಯಮಂತ್ರಿ ಅವರು ಇಂದು, ಬೆಂಗಳೂರಿನ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ, ಪದಕ ಪ್ರದಾನ ಮಾಡಿ ಗೌರವಿಸುವರು. ಅರಣ್ಯ ಖಾತೆ ಸಚಿವ ಈಶ್ವರ್ ಖಂಡ್ರೆ ಮಾಹಿತಿ ನೀಡಿ, ಅರಣ್ಯ ಹಾಗೂ ವನ್ಯಜೀವಿ ಸಂರಕ್ಷಣೆ, ಅರಣ್ಯ ಕೃಷಿ ಹಾಗೂ ನಿರ್ವಹಣೆ, ಮಾನವ ವನ್ಯಪ್ರಾಣಿ ಸಂಘರ್ಷ ನಿಯಂತ್ರಣ, ನಾವಿನ್ಯಪೂರ್ಣ ಉಪಕ್ರಮ ಅಳವಡಿಕೆ ಇತ್ಯಾದಿ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ, ಅರಣ್ಯ ಇಲಾಖೆ ಸಿಬ್ಬಂದಿಗೆ ಪುರಸ್ಕಾರ ನೀಡಲಾಗುತ್ತಿದೆ ಎಂದರು.

<><><>

ಕೋಲಾರ ತಾಲೂಕಿನ ಸುಗಟೂರು ಗ್ರಾಮದ, ಅಂತಾರಾಷ್ಟ್ರೀಯ ಜಾನಪದ ಕಲಾವಿದ, ಗೋ.ನಾ. ಸ್ವಾಮಿ ಅವರಿಗೆ, 12ನೇ ವಿಶ್ವ ಕನ್ನಡ ಅಕ್ಕ ಸಮ್ಮೇಳನದಲ್ಲಿ ವಿಶ್ವ ಮಾನ್ಯ ಕನ್ನಡಿಗ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಅಮೆರಿಕದ ವರ್ಜೀನಿಯಾ

ರಾಜ್ಯದ ರಿಚ್‌ಮಂಡ್ ನಗರದಲ್ಲಿ, ಮೂರು ದಿನಗಳ ಕಾಲ ನಡೆದ, ಅಕ್ಕ ಸಮ್ಮೇಳನದಲ್ಲಿ ನೂರಾರು ಕಲಾವಿದರು ಭಾಗವಹಿಸಿದ್ದರು.

<><><>

87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಹಿನ್ನೆಲೆ, ಮಂಡ್ಯ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ, ಉಸ್ತುವಾರಿ ಸಮಿತಿ ಸಭೆ ನಡೆಯಿತು. ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಅವರು ಮಾತನಾಡಿ, ಎನ್.ಸಿ.ಸಿ., ಎನ್.ಎಸ್.ಎಸ್. ಹಾಗೂ ಸ್ಕೌಟ್ಸ್ ಮತ್ತು ಗೈಡ್ಸ್ ತಂಡಗಳ, ಸ್ವಯಂ ಸೇವಕರ ಸೇವೆಯನ್ನು, ನಾಡು–ನುಡಿಯ ಸಮ್ಮೇಳನದಲ್ಲಿ ಅಚ್ಚುಕಟ್ಟಾದ ನಿರ್ವಹಣೆಗೆ ತರಬೇತಿ ನೀಡಿ, ಬಳಸಿಕೊಳ್ಳಲು ಸೂಚಿಸಿದರು.

<><><>

ಶ್ರಾವಣ ಮಾಸದ ಅಂಗವಾಗಿ, ಧಾರವಾಡದ ಶ್ರೀ ಮುರುಘಾಮಠದಲ್ಲಿ ಆಯೋಜಿತ, ಶ್ರೀ ಮದಘಣಿ ಮುರುಘೇಂದ್ರ ಮಹಾಶಿವಯೋಗಿಗಳವರ ಜೀವನ ಮತ್ತು ಸಾಹಿತ್ಯ ಪ್ರವಚನ ಇಂದು ಸಮಾರೋಪಗೊಳ್ಳಲಿದೆ. ಶ್ರೀ ಮಠದ ಸಭಾಂಗಣದಲ್ಲಿ ಇಂದು ಸಂಜೆ 6 ಗಂಟೆಗೆ, ಶ್ರೀ ಚನ್ನಬಸವಣ್ಣನವರ ಕರಣ ಹಸಿಗೆ ವ್ಯಾಖ್ಯಾನ ಸಂಪುಟ ಬಿಡುಗಡೆಯಾಗಲಿದೆ. ಸಂಪುಟದ ಸಂಪಾದಕ ಡಾಕ್ಟರ್ ವೀರಣ್ಣ ರಾಜೂರ ಅವರು, ಗ್ರಂಥದ ಕುರಿತು ಮಾತನಾಡುವರು. ಅನೇಕ ಮಠಾಧೀಶರು ಸಾನ್ನಿಧ್ಯ ವಹಿಸಲಿದ್ದಾರೆ. ಗಣ್ಯರು ಪಾಲ್ಗೊಳ್ಳಲಿದ್ದಾರೆ.

<><><>

ಹಾಸನ ಮೂಲದ ಅಂತಾರಾಷ್ಟ್ರೀಯ ಕ್ರೀಡಾಪಟು ಸುಹಾಸ ಯತಿರಾಜು, ಪ್ಯಾರಿಸ್ ಪ್ಯಾರಾಲಿಂಪಿಕ್ಸ್ ಕ್ರೀಡಾಕೂಟದ, ಪುರುಷರ ಬ್ಯಾಡ್ಮಿಂಟನ್ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಜಯಿಸಿದ್ದಾರೆ. 41 ವರ್ಷ ವಯಸ್ಸಿನ ಸುಹಾಸ್ ಯತಿರಾಜು, 2007 ನೇ ಸಾಲಿನ, ಉತ್ತರ ಪ್ರದೇಶ ಕೇಡರ್‌ನ ಐ.ಎ.ಎಸ್. ಅಧಿಕಾರಿ. ಸುಹಾಸ, ಪ್ಯಾರಾಲಿಂಪಿಕ್ ಕ್ರೀಡಾಕೂಟದಲ್ಲಿ ಗಳಿಸಿದ, ಎರಡನೇ ಬೆಳ್ಳಿ ಪದಕವಾಗಿದೆ.

<><><>

ಕಲಬುರಗಿಯ ಭೀಮಾ ಹಾಗೂ ಬೆಣ್ಣೆತೋರಾ ನದಿ ಪಾತ್ರದಲ್ಲಿ, ಮಳೆ ಹಿನ್ನೆಲೆ, ನಗರಕ್ಕೆ ಪೂರೈಕೆಯಾಗುತ್ತಿರುವ ಕುಡಿಯುವ ನೀರು, ಮಣ್ಣು ಮಿಶ್ರಿತವಾಗಿದೆ. ಕುಡಿಯುವ ನೀರನ್ನು ಶುದ್ಧೀಕರಿಸಿ, ಸೂಪರ್ ಕ್ಲೋರಿನೇಶನ್ ಮಾಡಿ ಸರಬರಾಜು ಮಾಡಲಾಗುತ್ತಿದೆ. ಕಲಬುರಗಿ ನಗರದ ಸಾರ್ವಜನಿಕರು ಮುನ್ನೆಚ್ಚರಿಕೆ ಕ್ರಮವಾಗಿ ಕಾಯಿಸಿ, ಆರಿಸಿ ಬಳಿಕ ಸೋಸಿದ ನೀರನ್ನು ಕುಡಿಯಲು, ಕಾರ್ಯಪಾಲಕ ಅಭಿಯಂತರರು ಕೋರಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಕಾನು ಸೊಪ್ಪಿನ ಬೆಟ್ಟಗಳಲ್ಲಿ, ಪಾರಂಪರಿಕ ಸಾಗುವಳಿ ಸಮಸ್ಯೆಗೆ, ಪರ್ಯಾಯ ಪರಿಹಾರ ಸೂತ್ರ – ಮಧು ಬಂಗಾರಪ್ಪ.
- 'ವರ್ತುಳ ಆರ್ಥಿಕತೆ; ಮೌಲ್ಯ ಹೆಚ್ಚಿಸಲು ಸೇತುವೆಯಾಗಿ, ಪಾಲುದಾರಿಕೆ'– ಧ್ಯೇಯದೊಂದಿಗೆ, ವಿಶ್ವ ತೆಂಗು ದಿನಾಚರಣೆ.
- ಬಾಲ್ಯ ವಿವಾಹ ತಡೆಗೆ, ನೂತನ ಕಾಯ್ದೆ ಜಾರಿಗೆ – ಲಕ್ಷ್ಮೀ ಹೆಬ್ಬಾಳ್ಕರ್.
- ವಾರ್ಷಿಕ 80 ಕೋಟಿ ರೂಪಾಯಿ, ಅಲ್ಪಸಂಖ್ಯಾತರಿಗೆ ಶಿಷ್ಯವೇತನ – ಝಮೀರ್ ಅಹ್ಮದ್ ಖಾನ್.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>